# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 740 |
| ಸದಸ್ಯರ ಹೆಸರು | : | ಡಾ|| ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 21/08/2026 |
| ಉತ್ತರಿಸುವ ಸಚಿವರು | : | ಕಾರ್ಮಿಕ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿರುವ ಒಟ್ಟು ಗಾರ್ಮೆಂಟ್ಸ್ (ಕಾರ್ಖಾನೆಗಳ) ಸಂಖ್ಯೆ ಎಷ್ಟು; ಇದರಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು;</td><td>ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ವ್ಯಾಪ್ತಿಗೆ ಬರುವ ಕಾರ್ಖಾನೆಗಳ ಕಾಯ್ದೆ, 1948 ರಡಿ ರಾಜ್ಯದಲ್ಲಿ ನೋಂದಾವಣೆಯಾಗಿರುವ ಗಾರ್ಮೆಂಟ್ಸ್ ಕಾರ್ಖಾನೆಗಳ ಸಂಖ್ಯೆ ಮತ್ತು ಅದರಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಅಂಕಿ ಅಂಶಗಳು ಈ ಕೆಳಗಿನಂತಿರುತ್ತದೆ.
<table>
<tr><th rowspan="2">ಕಾರ್ಖಾನೆಗಳ ಕಾಯ್ದೆ, 1948 ರಡಿಯಲ್ಲಿ ನೋಂದಾವಣೆಯಾಗಿರುವ ಗಾರ್ಮೆಂಟ್ಸ್ ಕಾರ್ಖಾನೆಗಳು</th><th colspan="3">ಕಾರ್ಮಿಕರ ಸಂಖ್ಯೆ</th></tr>
<tr><th>ಪುರುಷರು</th><th>ಮಹಿಳೆಯರು</th><th>ಒಟ್ಟು</th></tr>
<tr><td>1181</td><td>1,18,921</td><td>2,84,641</td><td>4,03,562</td></tr>
</table></td></tr>
<tr><td>ಆ</td><td>ಗಾರ್ಮೆಂಟ್ಸ್ ಕಾರ್ಖಾನೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಸಂದರ್ಭದಲ್ಲಿ ಸರ್ಕಾರ ವಿಧಿಸಿರುವ ಮಾನದಂಡಗಳೇನು; ಇರುವ ಮಾನದಂಡಗಳನ್ನು ಪಾಲಿಸದ ಕಾರ್ಖಾನೆಗಳ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ;</td><td>ಕಾರ್ಖಾನೆಗಳ ಕಾಯ್ದೆ, 1948 ಮತ್ತು ಅದರಡಿಯಲ್ಲಿನ ನಿಯಮಗಳಲ್ಲಿ (ಪ್ರಸ್ತುತ ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆ, 2020) ನಿಗದಿಪಡಿಸಲಾಗಿರುವ ಕಲ್ಯಾಣ ಸೌಲಭ್ಯಗಳನ್ನು ಮತ್ತು ಗಾಳಿ ಬೆಳಕಿನ ವ್ಯವಸ್ಥೆಯನ್ನು ಪರಿಗಣಿಸಿ ಇಲಾಖೆಯಿಂದ ಪರವಾನಗಿ ನೀಡಲಾಗುತ್ತಿದೆ.<br>ಕಾರ್ಖಾನೆಗಳ ಆಡಳಿತ ವರ್ಗದವರು ಈ ಕೆಳಗಿನ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ.<br><br>1) ಕಾರ್ಖಾನೆಯ ನಕ್ಷಾನುಮೋದನೆ ಮತ್ತು ನೋಂದಣಿ<br>2) ಕೆಲಸದ ಸಮಯ ಮತ್ತು ವೇತನ ಹಾಗೂ ವೇತನ ಪಾವತಿಯ ದಿನ ನಿಗದಿ<br>3) ಮೇಲಿನ ಕಾಯ್ದೆ ಅಡಿ ನಿಗಧಿಪಡಿಸಲಾಗಿರುವ ಕಲ್ಯಾಣ ಸೌಲಭ್ಯಗಳು ಮತ್ತು ಮೂಲ ಸೌಕರ್ಯಗಳು<br>4) ಮಹಿಳಾ ಕಾರ್ಮಿಕರ ಸುರಕ್ಷತೆಗೆ ಸಂಬಂಧಿಸಿದಂತೆ ಆಂತರಿಕ ದೂರು ಸಮಿತಿ ರಚನೆ, ಹೆರಿಗೆ ರಜೆ, ಬಾಲವಾಡಿ ಸೌಲಭ್ಯ, ರಾತ್ರಿ ಪಾಳಿಯಲ್ಲಿ ಸುರಕ್ಷತೆಯೊಂದಿಗೆ ಉಚಿತ ವಾಹನ ಸೌಲಭ್ಯ<br>5) ಕಾಯ್ದೆ ಅಡಿಯಲ್ಲಿ ನಿಗದಿಪಡಿಸಲಾಗಿರುವ ಆರೋಗ್ಯ ಮತ್ತು ಸುರಕ್ಷತಾ ಕ್ರಮಗಳು<br><br>ನಿಯಮಾನುಸಾರ ಮಹಿಳಾ ಕಾರ್ಮಿಕರಿಗೆ ಒದಗಿಸಬೇಕಾಗಿರುವ ಕಲ್ಯಾಣ ಸೌಲಭ್ಯ ಮತ್ತು ಸುರಕ್ಷತೆಗೆ ಇರುವ ಮಾನದಂಡಗಳನ್ನು ಕಾರ್ಖಾನೆಗಳ ಆಡಳಿತವರ್ಗದವರು ಅನುಷ್ಠಾನಗೊಳಿಸಿರುವ ಕುರಿತು ಇಲಾಖಾಧಿಕಾರಿಗಳು ಪರಿವೀಕ್ಷಣೆ ಸಮಯದಲ್ಲಿ ಪರಿಶೀಲಿಸಿ ಉಲ್ಲಂಘನೆಗಳು ಕಂಡುಬಂದಲ್ಲಿ, ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲು ಕ್ರಮವಹಿಸಲಾಗುತ್ತಿದೆ.<br><br>ಕಳೆದ 3 ವರ್ಷಗಳಲ್ಲಿ ಕಾರ್ಖಾನೆಗಳ ಕಾಯ್ದೆ 1948 ಮತ್ತು ಅದರಡಿಯಲ್ಲಿನ ನಿಯಮಗಳ ಉಲ್ಲಂಘನೆಗಾಗಿ ಒಟ್ಟು 27 ಕಾರ್ಖಾನೆಗಳ ವಿರುದ್ಧ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದೆ.</td></tr>
</table>

| | | |
|---|---|---|
| ಇ | ಮಹಿಳಾ ಉದ್ಯೋಗಿಗಳಿಗೆ ಗಾರ್ಮೆಂಟ್ಸ್ ಗಳಲ್ಲಿ ಇರುವಂತ ಸೌಲಭ್ಯಗಳೇನು: ಇವರಿಗೆ ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವೇತನವನ್ನು ನೀಡಲಾಗುತ್ತಿದೆಯೇ; ಸರ್ಕಾರ ನಿಗದಿಪಡಿಸುವ ನಿಯಮಗಳನ್ನು ಪಾಲಿಸದಿರುವ ಬಗ್ಗೆ ದೂರುಗಳು ಬಂದಿದೆಯೇ; ಬಂದಿದ್ದಲ್ಲಿ ಯಾವ ಕ್ರಮ ತೆಗೆದುಕೊಳ್ಳಲಾಗಿದೆ? | ಗಾರ್ಮೆಂಟ್ಸ್ ಗಳಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರಿಗೆ ನಿಯಮಾನುಸಾರ ಕಾರ್ಖಾನೆಗಳ ಆಡಳಿತ ವರ್ಗದವರು ಮೂಲಭೂತ ಹಾಗೂ ಕಲ್ಯಾಣ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ. ಅವುಗಳಲ್ಲಿ ಪ್ರಮುಖವಾದದ್ದು, ಶುದ್ಧ ಕುಡಿಯುವ ನೀರು, ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಹಾಗೂ ಅನ್ವಯಿಸುವಂತೆ ವಿಶ್ರಾಂತಿ ಕೊಠಡಿಗಳು, ಕ್ಯಾಂಟೀನ್ ಸೌಲಭ್ಯ, ಬಾಲವಾಡಿ ಸೌಲಭ್ಯ, ಕೆಲಸದ ಸ್ಥಳದಲ್ಲಿ ಸುರಕ್ಷತೆ ಮತ್ತು ರಕ್ಷಣೆ, ರಾತ್ರಿ ಪಾಳಿಯಲ್ಲಿ ಕಾರ್ಯನಿರ್ವಹಿಸುವ ಮಹಿಳೆಯರಿಗೆ ಕಾರ್ಖಾನೆಯಲ್ಲಿ ಸಿಸಿಟಿವಿ ಭದ್ರತೆ ಹಾಗೂ ಉಚಿತ ಮತ್ತು ಸುರಕ್ಷಿತ ವಾಹನ ಇತ್ಯಾದಿ ಸೌಲಭ್ಯಗಳನ್ನು ಕಾರ್ಖಾನೆಗಳ ಕಾಯ್ದೆ, 1948 ಮತ್ತು ಅದರಡಿಯಲ್ಲಿನ ನಿಯಮಗಳಲ್ಲಿ ನಿಗದಿಪಡಿಸಲಾಗಿರುತ್ತದೆ.<br><br>ಗಾರ್ಮೆಂಟ್ಸ್ ಉದ್ದಿಮೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಪಡಿಸಲು ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಅಧಿಸೂಚನೆಯಲ್ಲಿ ನಿದಿಪಡಿಸಿದ ಕನಿಷ್ಠ ವೇತನವನ್ನು ಉದ್ಯೋಗದಾರರು ನೀಡಬೇಕಿರುತ್ತದೆ.<br><br>ಕನಿಷ್ಠ ವೇತನ ಪಾವತಿಸದ ಕುರಿತು ವಿವಿಧ ಮೂಲಗಳಿಂದ ದೂರುಗಳು ಸ್ವೀಕೃತವಾದಲ್ಲಿ ಹಾಗೂ ದೈನಂದಿನ ತಪಾಸಣಾ ಸಂದರ್ಭದಲ್ಲಿ ಕಂಡುಬಂದಲ್ಲಿ ಕನಿಷ್ಠ ವೇತನ ಕಾಯ್ದೆ, 1948 ಅಧಿಸೂಚಿಸಲ್ಪಟ್ಟ ನಿರೀಕ್ಷಕರು ನಿಯಮಾನುಸಾರ ಪರಿಶೀಲಿಸಿ, ತಪಾಸಣೆ ನಡೆಸಿ, ಉಲ್ಲಂಘನೆಗಳು ಕಂಡುಬಂದಲ್ಲಿ ಸದರಿ ಕಾಯ್ದೆಯಡಿ ಅಧಿಸೂಚಿಸಲ್ಪಟ್ಟ ಸಕ್ಷಮ ಪ್ರಾಧಿಕಾರಿಗಳ ಮುಂದೆ ಕ್ಲೇಮ್ ಅರ್ಜಿಗಳನ್ನು ಸಲ್ಲಿಸುತ್ತಿದ್ದು, ಕ್ಲೇಮ್‌ಪ್ರಾಧಿಕಾರಿಗಳು ಸೆಕ್ಷನ್ 20(1) ರಡಿ ಸದರಿ ಕ್ಲೇಮ್ ಅರ್ಜಿಗಳನ್ನು ಪರಿಶೀಲಿಸಿ, ವಿಚಾರಣೆ ನಡೆಸಿ, ನಿಯಮಾನುಸಾರ ಆದೇಶ ಹೊರಡಿಸುವ ಮೂಲಕ ವ್ಯತ್ಯಾಸದ ಕನಿಷ್ಠ ವೇತನದ ಜೊತೆಗೆ ಪರಿಹಾರವನ್ನು ಪಾವತಿಸಲು ಸಂಬಂಧಿಸಿದ ಗುತ್ತಿಗೆದಾರರು/ಸಂಸ್ಥೆಗಳಿಗೆ ನಿರ್ದೇಶನಗಳನ್ನು ನೀಡಲಾಗುತ್ತಿದೆ.<br><br>ಮುಂದುವರೆದು, ಕಳೆದ ಮೂರು ವರ್ಷದ ಅವಧಿಯಲ್ಲಿ ಖಾಸಗಿ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಕಾರ್ಮಿಕರಿಗೆ ಸಂಬಂಧಿಸಿದಂತೆ ರೂ. 32.36 ಲಕ್ಷ ಮೊತ್ತದ 4 ಕ್ಲೇಮ್ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರಿಗಳು ಮುಂದೆ ದಾಖಲಿಸಲಾಗಿರುತ್ತದೆ. ಅದರಲ್ಲಿ 3 ಕ್ಲೇಮ್ ಅರ್ಜಿಗಳನ್ನು ವಿಲೇವಾರಿ ಮಾಡಿ, ರೂ. 2.29 ಲಕ್ಷದ ಮೊತ್ತದ ಪಾವತಿಗಾಗಿ ಆದೇಶ ಹೊರಡಿಸಲಾಗಿದ್ದು ಉಳಿದ ಕ್ಲೇಮ್ ಅರ್ಜಿ ವಿಚಾರಣಾ ಹಂತದಲ್ಲಿದ್ದು ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ. |

**ಕಡತ ಸಂಖ್ಯೆ: ಕಾಇ 81 ಕಾಬಾನಿ 2026**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**